ಸೂಟೆಯ ಬೆಳಕಿನಲ್ಲಿ ಚಂಡೆಯ ಧ್ವನಿಯ ನದುರು ಹಿಡಿದು ಬಯಲಾಟ ನೋಡಲು ಹೋಗುತ್ತಿದ್ದೆ. ಶಾಲೆಗೆ ಹೋಗುವಾಗ ಅಣ್ಣನ ಹೋಟೆಲಿನಲ್ಲಿ ಸಕಲ ಕಲಾವಲ್ಲಭನಾಗಿ ಪಾರ್ಟ್ ಟೈಮ್ ಕೆಲಸ ಮಾಡುವಾಗ ನಮ್ಮ ಹೋಟೇಲಿನ ಕಾಯಂ ಗಿರಾಕಿಯಾದ ತೋನ್ಸೆ ಕಾಂತಪ್ಪ ಮಾಸ್ತರರಿಂದ ಯಕ್ಷಗಾನದ ವಿವಿಧ ಹೆಜ್ಜೆಗಾರಿಕೆ, ಭಂಗಿಗಳನ್ನು ಅವರ 'ಹೋಟೆಲ್ ಪ್ರಾತ್ಯಕ್ಷಿಕೆ'ಯ ಮೂಲಕ ಕಲಿತೆ. ಆ ಬಳಿಕ ಶಾಸ್ತ್ರೀಯವಾಗಿ ನನಗೆ ಯಕ್ಷಗಾನವನ್ನು ಕಲಿಸಿದವರು 'ಅಭಿನವ ಅಭಿಮನ್ಯು' ಎಂದು ಖ್ಯಾತರಾದ ಬೆಳ್ಳಳೆ ಸುಬ್ಬಣ್ಣಯ್ಯ, ಖ್ಯಾತ ಸ್ತ್ರೀವೇಷಧಾರಿ ಸೆಕ್ಕಟ್ಟು ಸೀತಾರಾಮಯ್ಯ ಹಾಗೂ ಕೊಡವೂರು ಕೃಷ್ಣಮೂರ್ತಿ ರಾಯರು.

ಆಗಿನ ಕಾಲದಲ್ಲೆ ಕೇವಲ ಶನಿವಾರ ಮಾತ್ರ ಪ್ರದರ್ಶನ ನೀಡುತ್ತಿದ್ದ ಕೊಡವೂರು ಮೇಳದಲ್ಲಿ ಸ್ತ್ರೀ ಪಾತ್ರ ನಿರ್ವಹಿಸುತ್ತಿದ್ದೆ. ಒಬ್ಬಿಬ್ಬರನ್ನು ಬಿಟ್ಟರೆ ಎಲ್ಲ ವೇಷಧಾರಿಗಳೂ ಕೊಡವೂರು ಶಾಲೆಯ ಮಕ್ಕಳೇ ಆಗಿದ್ದರು. ಹೀಗಾಗಿ ಶನಿವಾರ ಮಾತ್ರ ಆಟ. ಮುಂದೆ ಈ ಮೇಳ ವೃತ್ತಿಪರವಾಗಿ ಮಾರ್ಪಾಟು ಹೊಂದಿ ಕೆಲ ವರ್ಷಗಳ ಬಳಿಕ ಅವಸಾನ ಕಂಡಿತು.

ನಾಟಕ ರಂಗಕ್ಕೆ ಪ್ರವೇಶ ಪಡೆದದ್ದು, ನಾನು ಕಲ್ಯಾಣಪುರದ ಮಿಲಾಗ್ರಿಸ್ ಹೈಸ್ಕೂಲಲ್ಲಿ ಓದುತ್ತಿದ್ದಾಗ. ಇಲ್ಲಿ ಸುಮಾರು ಎಂಟು ನಾಟಕಗಳಲ್ಲಿ ನಾಯಕಿಯ ಪಾತ್ರ ವಹಿಸಿದೆ. ನಾನು ನಟಿಸಿದ 'ಮೇವಾಡ ಪತನ' ನಾಟಕ ಅಪೂರ್ವ ಯಶಸ್ಸು ಕಂಡು ಕೆಲವು ಬೆನಿಫಿಟ್ ಶೋಗಳೂ ಏರ್ಪಾಟಾದವು. ಈ ನಾಟಕಗಳ ಯಶಸ್ಸಿಗೆ ಕಾರಣರಾದವರು ನಮ್ಮ ಮೆಚ್ಚಿನ ಗುರುಗಳಾದ ಕುಕ್ಕಿಲ್ಲಾಯ ಮಾಸ್ಟ್ರು.

ಉಡುಪಿಯ ಎಂ.ಜಿ.ಎಂ. ಕಾಲೇಜಿನಲ್ಲಿ ಓದುತ್ತಿದ್ದಾಗ ನಾನು ಹತ್ತು ಹಲವು ನಾಟಕಗಳಲ್ಲಿ ಪಾತ್ರ ವಹಿಸಿದೆ. ಈ ಸಮಯ ನನ್ನ ಗಂಟಲ ಧ್ವನಿ ಬಿರುಸಾದ ಕಾರಣ ಸ್ತ್ರೀ ಪಾತ್ರಕ್ಕೆ ಅನಿವಾರ್ಯವಾಗಿ ತಿಲಾಂಜಲಿ ನೀಡಬೇಕಾಯಿತು.

ನಮ್ಮ ನಾಟಕಗಳನ್ನು ನಿರ್ದೇಶಿಸುತ್ತಿದ್ದ ಪ್ರೊ. ಬಿ.ವಿ. ಆಚಾರ್ಯರು ಹೆಚ್ಚಾಗಿ ಆಡಿಸುತ್ತಿದ್ದದ್ದು ಗುಂಡಣ್ಣ, ಪರ್ವತವಾಣಿ, ದಾಶರಥಿ ದೀಕ್ಷಿತರ ನಾಟಕಗಳನ್ನು. ನಾನು ಎಲ್ಲ ನಾಟಕಗಳಲ್ಲೂ ಹಾಸ್ಯ ಪಾತ್ರ ವಹಿಸಿ ಪ್ರೇಕ್ಷಕರ ಮನ ಗೆಲ್ಲುವಲ್ಲಿ ಸಫಲನಾದೆ. ನಾನು ಹಾಗೂ ಮುಂದೆ ಖ್ಯಾತ ಪತ್ರಕರ್ತ, ಸಾಹಿತಿಯಾಗಿ ಹೆಸರು ಮಾಡಿದ ದಿ. ಎ. ಈಶ್ವರಯ್ಯ ಜೊತೆಯಾಗಿ ನಟಿಸಿದ ಹಲವಾರು ನಾಟಕಗಳು **hit** ಎನಿಸಿದವು. ನಾನು ಮತ್ತು ಈಶ್ವರಯ್ಯ ಅಣ್ಣತಮ್ಮಂದಿರಾಗಿ ನಟಿಸಿದ 'ಗೃಹಭಂಗ' ದುರಂತ ನಾಟಕ ಅದೆಷ್ಟು ಪರಿಣಾಮಕಾರಿಯಾಗಿತ್ತೆಂದರೆ, ಆಗ ಮುಖ್ಯ ಅತಿಥಿಯಾಗಿ ಆಗಮಿಸಿದ್ದ ಮೈಸೂರು ವಿಶ್ವವಿದ್ಯಾಲಯದ ಉಪಕುಲಪತಿಗಳಾಗಿದ್ದ ಪ್ರೊ. ನಿಕಮ್ ಕಣ್ಣೀರು ಸುರಿಸಿದ್ದರು. ನಾಟಕದ ಬಳಿಕ ಅವರು ನಮ್ಮಿಬ್ಬರ ಅಭಿನಯಕ್ಕೆ ಶಾಭಾಸ್‌ಗಿರಿ ಕೊಟ್ಟು ಹರಸಿದರು.

ಮುಂಬಯಿಗೆ ಬಂದ ಬಳಿಕ ನಾಟಕಾಭಿನಯದ ಗೋಜಿಗೆ ಹೋಗಲಿಲ್ಲ. ಸಣ್ಣ ಕತೆಗಳಲ್ಲದೆ ನಾಟಕ ರಚನೆಯಲ್ಲೂ ಕೈಯಾಡಿಸಬೇಕೆಂಬ ಹಂಬಲದಿಂದ 'ಅರಣ್ಯಕ್ಕೊಬ್ಬ ಅರಸು' ಮತ್ತು 'ಲಗ್ಗೇಜ್' ಎನ್ನುವ ನಾಟಕಗಳನ್ನು ಅನುವಾದಿಸಿದೆ. ಇವೆರಡೂ ಪ್ರಕಟವಾಗುವುದು ಬಿಡಿ, ಪ್ರದರ್ಶನವನ್ನೂ ಕಾಣಲಿಲ್ಲ. ಆ ಬಳಿಕ ವ್ಯಾಸರಾಯ ಬಲ್ಲಾಳರ ಸಣ್ಣ ಕತೆಯೊಂದನ್ನು 'ಅಭಯ' ಎನ್ನುವ ನಾಟಕವಾಗಿ ಪರಿವರ್ತಿಸಿದೆ. ಇದು ಪ್ರದರ್ಶನಗೊಂಡು ಬಲ್ಲಾಳರ ಮೆಚ್ಚುಗೆಗೂ ಪಾತ್ರವಾಯಿತು.

ನನ್ನ ಗೆಳೆಯರಾದ ಪ್ರಸಿದ್ಧ ರಂಗ ಹಾಗೂ ಚಿತ್ರ ನಿರ್ದೇಶಕ ಸದಾನಂದ ಸುವರ್ಣರ ಒತ್ತಾಯ ಹಾಗೂ ಅವರ ಛೇಡಿಸುವಿಕೆಯ ಮೂಲಕ ನಾಟಕ ರಚನೆಯನ್ನು ಗಂಭೀರವಾಗಿ ತೆಗೆದುಕೊಂಡೆ. ರಂಗಭೂಮಿ ನನಗೆ ಅಪಾರ ತೃಪ್ತಿ ನೀಡಿದೆ. ಕತೆಗಳನ್ನು ಬರೆಯುತ್ತಿದ್ದ ನನ್ನನ್ನು ನಾಟಕಕಾರನಾಗಿ ಬೆಳೆಸಿದೆ.